ಈ) ಡಂಕಲ್ ಪ್ರಸ್ತಾವನೆಯಲ್ಲಿ ಭಾರತ ಕೃಷಿ ನೀತಿ ಮತ್ತು ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಸ್ವತಂತ್ರ ಹಾಗೂ ಹೊಂದಿಸಿಕೊಳ್ಳಲು ಧಕ್ಕೆಯಾಗುವಂತ ಯಾವುದೇ ನಿಬಂಧನೆಗಳು ಇರುವುದಿಲ್ಲ.

ಎಲ್.ಓ.ಸಿ. ಹಣ ಬಿಡುಗಡೆ

552 - ಶ್ರೀ ಬಾಬುರಾವ್ ಚವಾಣ್ (ಶಹಬಾದ್): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ತಿನಲ್ಲಿ ಬರುತ್ತಿರುವ ಎಲ್.ಓ.ಸಿ. ಹಣ (ಎಂ.ಎನ್.ಪಿ) ಅಥವಾ 20 ಜೆ.ಆರ್.ವೈ ಹಾಗೂ ಇನ್ನಿತರ ಹಣವು ಮತ ಕ್ಷೇತ್ರವಾರು ಬಿಡುಗಡೆ ಮಾಡಲಾಗುವುದೇ ಅಥವಾ ತಾಲ್ಲೂಕುವಾರು ಬಿಡುಗಡೆ ಮಾಡಲಾಗುವುದೇ?

ಆ) ಕೆಲವು ತಾಲ್ಲೂಕುಗಳಲ್ಲಿ ನಾಲ್ಕು ಶಾಸಕರು ಇರುವುದರಿಂದ ಒಬ್ಬ ಶಾಸಕರಿಗೆ ಅಧಿಕಾರಿಗಳು ಮಲತಾಯಿ ಧೋರಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸಮನಾಗಿ ಎಲ್.ಓ.ಸಿ. ಹಂಚಲು ಸರ್ಕಾರದ ನಿಯಮಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಜಿಲ್ಲಾ ಪಂಚಾಯತ್ನಿಂದ ಎಂ.ಎನ್.ಪಿ ಮತ್ತು ಶೇ. 20ರಷ್ಟು ಜ.ರೋ.ಯೇ. ಅಡಿಯಲ್ಲಿ ಶಿಫಾರಸ್ಸಾಗಿರುವ ಅನುದಾನದ ಹಣವನ್ನು ಶೀರ್ಷಿಕೆವಾರು ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳಿಗೆ ಈ ಕಾರ್ಯಕ್ರಮಗಳಿಗಾಗಿ ಒಪ್ಪಿಗೆಯಾಗಿರುವ ಕ್ರಿಯಾ ಯೋಜನೆಯ ಪ್ರಕಾರ ಅವಶ್ಯಕತೆ ಮತ್ತು ಆದ್ಯತೆ ಮೇರೆಗೆ ಬಿಡುಗಡೆ ಮಾಡಲಾಗುವುದು. ತಾಲ್ಲೂಕುವಾರು ಅಥವಾ ಮತಕ್ಷೇತ್ರವಾರು ಬಿಡುಗಡೆ ಮಾಡುವುದಿಲ್ಲ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಬೀದರ್ ಸಾಲಗಳ ಜಿಲ್ಲೆಯಲ್ಲಿ ಮೇಲಿನ ಸುಸ್ತಿ ಬಡ್ಡಿ ಮನ್ನಾ

632 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ರೈತರು ತೆಗೆದುಕೊಂಡಿರುವ ಸಹಕಾರ ಬ್ಯಾಂಕುಗಳಲ್ಲಿನ ಸಾಲದ ಸುಸ್ತಿ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಿದೆಯೇ?

ಆ) ಹಾಗಿದ್ದಲ್ಲಿ ಬೀದರ್ ಜಿಲ್ಲೆಯಲ್ಲಿ ಇತ್ತೀಚೆಗೆ ಭೂಕಂಪ ಸಂಭವಿಸಿದ್ದರಿಂದ ರೈತರಿಗೆ ಅಪಾರ ಹಾನಿಯುಂಟಾಗಿರುವುದರಿಂದ ಬೀದರ್ ಜಿಲ್ಲೆಯ ಎಲ್ಲಾ ರೈತರ ಸಾಲದ ಬಡ್ಡಿಯನ್ನು ಮನ್ನಾ ಮಾಡಲು ಸರ್ಕಾರ ಆಲೋಚಿಸುತ್ತಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವಾಗ ನಿರ್ಧಾರ ಕೈಗೊಳ್ಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ)1-7-1993 ರಿಂದ 31-3-1994 ರ ಒಳಗೆ ರಾಜ್ಯದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ ಬಡ್ಡಿಯೊಂದಿಗೆ ಪೂರ್ತಿಯಾಗಿ ಅಸಲನ್ನು ಮರುಪಾವತಿ ಮಾಡಿದ ರೈತರ ಸಾಲದ ಮೇಲಿನ ಸುಸ್ತಿ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಿದೆ.

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದ ಜಿಲ್ಲಾ ಪರಿಷತ್ತುಗಳಿಗೆ ಮಂಜೂರಾದ ಹಣದ ಮೊತ್ತ

602 - ಶ್ರೀಮತಿ ಸುಮಾ ವಸಂತ (ವಿರಾಜಪೇಟೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ಫೆಬ್ರವರಿ 28ರವರೆಗೆ ರಾಜ್ಯದ ಜಿಲ್ಲಾ ಪರಿಷತ್ತುಗಳಿಗೆ ಮಂಜೂರಾದ ಹಣ ಎಷ್ಟು (ಜಿಲ್ಲಾವಾರು ವಿವರ ಕೊಡಿ)

ಆ) ಆ ಮಂಜೂರಾದ ಹಣದಲ್ಲಿ ಫೆಬ್ರವರಿ ಅಂತ್ಯದವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ?

ಇ) ಕೊಡಗು ಜಿಲ್ಲೆಯ 3ತಾಲ್ಲೂಕುಗಳಿಗೆ ಮಂಜೂರಾದ ಮತ್ತು ಬಿಡುಗಡೆಯಾಗಿರುವ ಹಣವೆಷ್ಟು?

ಈ) ಉಳಿದ ಹಣವನ್ನು ಮಾರ್ಚ್ 94ರ ಒಳಗಡೆ ಮಾಡಲಾಗುವುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) 1993-94ನೇ ಸಾಲಿನಲ್ಲಿ ರಾಜ್ಯದ ಜಿಲ್ಲಾ ಪಂಚಾಯತಿಗಳಿಗೆ ಮಂಜೂರಾದ ಹಣಗಳ ವಿವರ ಈ ರೀತಿ ಇದೆ.

	(ಕೋಟಿ ರೂ.ಗಳಲ್ಲಿ)
ಯೋಜನೆ	771.31
ಯೋಜನೇತರ	1085.98
ಮೊತ್ತ	1857.29

ಜಿಲ್ಲಾವಾರು ವಿವರಗಳನ್ನು ಲಗತ್ತಿಸಿರುವ ಅನುಬಂಧ-1ಮತ್ತು 2ರಲ್ಲಿ ತೋರಿಸಲಾಗಿದೆ.

ಆ) ಮಂಜೂರಾದ ಹಣದಲ್ಲಿ 1994ರ ಫೆಬ್ರವರಿ ಅಂತ್ಯದವರೆಗೆ ಬಿಡುಗಡೆಯಾದ ಅನುದಾನ ಈ ರೀತಿ ಇದೆ.

	(ಕೋಟಿ ರೂ.ಗಳಲ್ಲಿ)
ಯೋಜನೆ	556.50
ಯೋಜನೇತರ	679. 71
ಮೊತ್ತ	1236.21

ವಿವರಗಳನ್ನು ಲಗತ್ತಿಸಿರುವ ಅನುಬಂಧ-1 ಮತ್ತು 2 ರಲ್ಲಿ ತೋರಿಸಲಾಗಿದೆ.

ಇ) ಸರ್ಕಾರದಿಂದ ತಾಲ್ಲೂಕುವಾರು ಮಂಜೂರಾತಿ ಮಾಡುವ ಕ್ರಮವಿಲ್ಲ. ಜಿಲ್ಲಾ ಪರಿಷತ್ನಿಂದ 3 ತಾಲ್ಲೂಕುಗಳಿಗೆ ಬಿಡುಗಡೆ ಮಾಡಿದ ವಿವರ ಹೀಗಿವೆ.

	(ಕೋಟಿ ರೂ.ಗಳಲ್ಲಿ)
ಮಡಕೇರಿ	1.39
ಸೋಮವಾರಪೇಟೆ	1.69
ವಿರಾಜಪೇಟೆ	1.24
ಮೊತ್ತ	4.32